**ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವ್ಯವಸಾಯದ ಭೂಮಿಯ ಭೂ ಸ್ವಾಧೀನ.**

711-ಶ್ರೀ ಬಿ.ಐ. ಪಾಟೀಲ್ (ಉಚಾಗಾಂವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ಫಲವತ್ತಾದ ವ್ಯವಸಾಯದ ಭೂಮಿಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಭೂ ಸ್ವಾಧೀನ ಮಾಡಿದೆಯೇ?*

*ಆ) ಈ ಬಗ್ಗೆ ಸರ್ಕಾರದ ನೀತಿ ಏನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

**ಖಾಸಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಸತಿನಿಲಯದ ನಿರ್ಮಾಣದ ಬಗ್ಗೆ**

1032-ಶ್ರೀ ಮನೋಹರ ಐನಾಪುರ (ಬೆಳ್ಳೊಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಖಾಸಗಿ ವಿದ್ಯಾಸಂಸ್ಥೆಯವರು ನಡೆಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅನುದಾನಿತ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ?*

*ಆ) ಹಾಗಾದರೆ, 1992-93ನೇ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಸರ್ಕಾರವು ಮಂಜೂರು ಮಾಡಲಾಗಿದೆ.*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) 1992-93ನೇ ಸಾಲಿನಲ್ಲಿ ರೂ. 20,000 ಲಕ್ಷ ಒದಗಿಸಲಾಗಿದೆ.

ಆ) 1992-93ನೇ ಸಾಲಿನಲ್ಲಿ ಇದುವರೆಗೆ ಒಂದು ಅನುದಾನಿತ ವಿದ್ಯಾರ್ಥಿನಿಲಯಕ್ಕೆ ರೂ. 75,500 ಗಳ ಧನಸಹಾಯ ನೀಡಲಾಗಿದೆ. ಪ್ರಸ್ತಾವನೆಗಳು ಬಂದ ಹಾಗೆ, ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಪ. ಜಾತಿ, ಪ.ವರ್ಗದ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯಗಳೇ ದುರಸ್ತಿ.**

707- ಶ್ರೀ ಆಂಜನಾಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*